# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 965 |
| ಉತ್ತರಿಸಬೇಕಾದ ಸಚಿವರು | : | ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 24-02-2023 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕೃಷಿ ವಿಸ್ತರಣಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅಗತ್ಯವಿರುವ ಸಿಬ್ಬಂದಿಗಳು ಲಭ್ಯವಿದ್ದಾರೆಯೇ; ಕೃಷಿ ವಿಸ್ತರಣಾ ಘಟಕಗಳು ಎಷ್ಟು; ಅದರಲ್ಲಿರುವ ಸಿಬ್ಬಂದಿಗಳೆಷ್ಟು; ಅವರು ಕೃಷಿ ವಿಸ್ತರಿಸಬಹುದಾದ ಪ್ರದೇಶಗಳ ಸಮೀಕ್ಷೆ ಮತ್ತು ವಿಸ್ತರಣಾ ಸಾಮರ್ಥ್ಯ ವೃದ್ಧಿಸುವ ಕೆಲಸ ಮಾಡುತ್ತಿದ್ದಾರೆಯೇ; (ಜಿಲ್ಲಾವಾರು ಕೃಷಿ ವಿಸ್ತರಣಾ ಚಟುವಟಿಕೆಗಳ ವಿವರ ನೀಡುವುದು)</td><td>
• ಹೌದು ಸಿಬ್ಬಂದಿಗಳು ಲಭ್ಯವಿದ್ದಾರೆ.<br>
• ರಾಜ್ಯದ ನಾಲ್ಕು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ವಿಸ್ತರಣಾ ಘಟಕಗಳಿವೆ.<br>
<table>
<tr><th>ಕೃವಿವಿ</th><th>ಕೃಷಿ ವಿಜ್ಞಾನ ಕೇಂದ್ರ</th><th>ಕೃಷಿ ವಿಸ್ತರಣಾ ಘಟಕ</th></tr>
<tr><td>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು</td><td>7</td><td>2</td></tr>
<tr><td>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ</td><td>6</td><td>5</td></tr>
<tr><td>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು</td><td>7</td><td>6</td></tr>
<tr><td>ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ</td><td>4</td><td>2</td></tr>
</table>
• ಕೃಷಿ ವಿಸ್ತರಣಾ ಘಟಕಗಳಲ್ಲಿ ಲಭ್ಯವಿದ್ದು ರೈತರಿಗೆ ನೂತನ ಕೃಷಿ ತಳಿ ತಂತ್ರಜ್ಞಾನಗಳ ಪರಿಚಯ, ಪ್ರಾತ್ಯಕ್ಷಿಕೆಗಳು, ರೈತರ ಕ್ಷೇತ್ರ ಪಾಠಶಾಲೆ, ಕ್ಷೇತ್ರೋತ್ಸವಗಳು, ರೈತರ ಅಗತ್ಯಾನುಸಾರ ತರಬೇತಿ ಕಾರ್ಯಕ್ರಮಗಳು, ಮಣ್ಣು/ನೀರು ವಿಶ್ಲೇಷಣೆ, ಸಮಸ್ಯಾತ್ಮಕ ರೈತರ ತಾಕುಗಳಿಗೆ ಭೇಟಿ ಹಾಗೂ ವಿವಿಧ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>
• ಹವಾಮಾನಕ್ಕೆ ಸೂಕ್ತವಾದ ಕೃಷಿ ತಳಿಗಳ ಪರಿಚಯ, ನೂತನ ಕೃಷಿ ತಾಂತ್ರಿಕತೆಗಳ ಅಳವಡಿಸಿಕೊಂಡು ಸಮಗ್ರ ಕೃಷಿ ಪದ್ಧತಿಯಲ್ಲಿ ರೈತರು ಕೃಷಿ ಚಟುವಟಿಕೆಗಳಿಂದ ಕೃಷಿ
</td></tr>
</table>

| | | |
|---|---|---|
| | | ಉತ್ಪನ್ನಗಳನ್ನು ಹೆಚ್ಚಿಸುವಂತೆ ವಿವಿಧ ವಿಸ್ತರಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>• **ಜಿಲ್ಲಾವಾರು ಕೃಷಿ ವಿಸ್ತರಣಾ ಚಟುವಟಿಕೆಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.**<br><br>**ಕೃಷಿ ಇಲಾಖೆಗೆ ಸಂಬಂಧಿಸಿದಂತೆ** ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ವಿಸ್ತರಣಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮಂಜೂರಾದ ಹುದ್ದೆಗಳಾದ ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ಅಧಿಕಾರಿಗಳೊಂದಿಗೆ ಆತ್ಮ ಯೋಜನೆಯಡಿ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ಹಾಗೂ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಜರಿದ್ದು ರೈತರಿಗೆ ಮಾಹಿತಿ ನೀಡುತ್ತಾರೆ.<br><br>ಪ್ರಸ್ತುತ ರಾಜ್ಯದಲ್ಲಿ ಒಟ್ಟು 742 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.<br><br>ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಕೆಳಗಿನಂತಿದೆ. |

| ಕ್ರ. ಸಂ | ಹುದ್ದೆಯ ಹೆಸರು | ಕಾರ್ಯ |
|---|---|---|
| 1 | ಕೃಷಿ ಅಧಿಕಾರಿ | 617 |
| 02 | ಸಹಾಯಕ ಕೃಷಿ ಅಧಿಕಾರಿ | 265 |
| 03 | ತಾಲ್ಲೂಕು ತಾಂತ್ರಿಕ ವ್ಯಸ್ಥಾಪಕರು | 163 |
| 04 | ಸಹಾಯಕ ತಾಂತ್ರಿಕ ವ್ಯಸ್ಥಾಪಕರು | 513 |

ರೈತರ ತರಬೇತಿ, ಗ್ರಾಮ ಸಭೆ ಇತರೆ ಕಾರ್ಯಕ್ರಮಗಳಲ್ಲಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಹಾಗೂ ದೊರೆಯುವ ಸೌಲಭ್ಯಗಳು/ಯೋಜನೆಗಳ ಬಗ್ಗೆ ತಿಳಿಸುತ್ತಿದ್ದಾರೆ. ಸೇವೆ/ಸೌಲಭ್ಯಗಳನ್ನು ನಿಯಮಿತವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ಮುಂದುವರೆದು, ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡುವುದು. ನಿಯತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದ ಅನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ ಇಲಾಖೆಯ ವಿವಿಧ ಯೋಜನೆಗಳನ್ನು /ಕಾರ್ಯಕ್ರಮಗಳನ್ನು

| | | |
|---|---|---|
| | | ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಕೃಷಿ ಇಲಾಖೆ ವತಿಯಿಂದ ಕೈಗೊಳ್ಳುವ ಕೃಷಿ ವಿಸ್ತರಣಾ ಚಟುವಟಿಕೆಗಳ ವಿವರಗಳನ್ನು ಅನುಬಂಧ 2 ರಲ್ಲಿ ಲಗತ್ತಿಸಿದೆ. |
| (ಆ) | ರಾಜ್ಯದಲ್ಲಿರುವ ಕೃಷಿ ವಿಸ್ತರಣಾ ಕಾರ್ಯಕ್ರಮಗಳು ಯಾವುವು; ಆಯಾಯ ವ್ಯಾಪ್ತಿಯಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಏನು ಕ್ರಮ ವಹಿಸಿದೆ; (ಜಿಲ್ಲಾವಾರು ವಿವರ ನೀಡುವುದು) | • ರಾಜ್ಯದಲ್ಲಿರುವ ಕೃಷಿ ವಿಸ್ತರಣಾ ಕೇಂದ್ರಗಳಲ್ಲಿ ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು, ರೈತರ ಕ್ಷೇತ್ರ ಪಾಠಶಾಲೆ, ದ್ವಿದಳ ಧಾನ್ಯಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಎಣ್ಣೆಕಾಳು ಬೆಳೆಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ತಂತ್ರಜ್ಞಾನ ಮರು ಪರಿಶೀಲನೆ, ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಜಾಗೃತಿ ಕಾರ್ಯಕ್ರಮ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.<br><br>• ಕೃಷಿ ವಿಸ್ತರಣೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗೆ ಹೊಸ ತಳಿಗಳು, ಹೊಸ ತಂತ್ರಜ್ಞಾನಗಳ ಬಗ್ಗೆ ಮುಂಚೂಣಿ ಪ್ರಾತ್ಯಕ್ಷಿಕೆಗಳು ಹಾಗೂ ಇತರೆ ಪ್ರಚಾರ ಕಾರ್ಯಕ್ರಮಗಳನ್ನು ಮಾಹಿತಿ ನೀಡಿ ಉತ್ಪಾದನಾ ಕ್ಷಮತೆಯನ್ನು ರೈತರ ಹೊಲ ಗದ್ದೆಗಳಲ್ಲಿ ತೋರಿಸಿ ಕೊಡಲಾಗುತ್ತದೆ.<br><br>**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.**<br><br>ಕೃಷಿ ಇಲಾಖಾವತಿಯಿಂದ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ** 2ರಲ್ಲಿ ಲಗತ್ತಿಸಿದೆ. ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಜಿಲ್ಲೆಯ ಬೆಳೆ ಹಾಗೂ ಹವಾಮಾನ ಆಧರಿಸಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಇ) | ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಸುಮಾರು 4 ರಿಂದ 6 ತಿಂಗಳು ಮಳೆ ಬರುತ್ತಿದ್ದು, ಅಲ್ಪಾವಧಿ ಬೆಳೆಗಳನ್ನು ಬೆಳೆಯಲು ಮತ್ತು ಕೃಷಿ ಚಟುವಟಿಕೆಗಳನ್ನು ವಿಸ್ತರಿಸಲು ಸರ್ಕಾರ ಸ್ಥಳ ನಿಗಧಿತ (ಲೊಕೇಷನ್ ಸ್ಪೆಸಿಫಿಕ್) ಕಾರ್ಯಕ್ರಮಗಳನ್ನು ಯೋಜಿಸಿದೆಯೇ; (ಜಿಲ್ಲಾವಾರು ವಿವರ ನೀಡುವುದು) | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ**, ಕೃಷಿ ವಿಜ್ಞಾನ ಕೇಂದ್ರ, ಶಿರಸಿ ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆ ಪದ್ಧತಿ -1 ಮತ್ತು ಬೆಳೆ ಪದ್ಧತಿ-2 ಇವುಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಮಳೆಯ ಸಾಂದ್ರತೆಗೆ ಅನುಗುಣವಾಗಿ ರೈತರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ. ಅಧಿಕ ಮಳೆ ಬೀಳುವ ಮತ್ತು ಕಡಿಮೆ ಮಳೆ ಬೀಳುವ ಪ್ರದೇಶಗಳಿಗೆ ಲೋಕೇಷನ್ ಸ್ಪೆಸಿಫಿಕ್ ತಳಿಗಳನ್ನು ಪರಿಚಯ ಮಾಡಿಸಲಾಯಿತು. ಶೇಂಗಾ, ಉದ್ದು ಮತ್ತು ಈರುಳ್ಳಿ ಬೆಳೆಗಳ ಮೇಲೆ ಮುಂಚೂಣಿ ಪ್ರಾತ್ಯಕ್ಷಿಕೆ, ತಂತ್ರಜ್ಞಾನ |

| | | |
|---|---|---|
| | | ಮರು ಪರಿಶೀಲನೆ ಹಾಗೂ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>**ಕೃಷಿ ಇಲಾಖೆಯ** ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೆ ಸಂಬಂಧಿಸಿದಂತೆ ಯಾವುದೇ ಸ್ಥಳ ನಿಗದಿತ (ಲೊಕೇಷನ್ ಸ್ಪೆಸಿಫಿಕ್) ಕಾರ್ಯಕ್ರಮಗಳನ್ನು ಯೋಜಿಸಿರುವುದಿಲ್ಲ. ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳನ್ನು ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಈ) | ಕರಾವಳಿ ಜಿಲ್ಲೆಗಳಲ್ಲಿ ಆಹಾರ ಬೆಳೆಗಳ ಕೃಷಿ ವ್ಯಾಪ್ತಿಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು) | • **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ**, ಕರಾವಳಿ ಜಿಲ್ಲೆಗಳಲ್ಲಿ ಕೃಷಿಯನ್ನು ಹೆಚ್ಚಿಸಲು ಕೃಷಿ ವಿಜ್ಞಾನ ಕೇಂದ್ರವು ಭತ್ತದ ಕೊಯ್ಲು ನಂತರ ಭತ್ತದ ಬೆಳೆಯಲ್ಲಿ ಮುಖ್ಯವಾದ ತಂತ್ರಜ್ಞಾನಗಳನ್ನು ಪರಿಚಯಿಸಲಾಯಿತು.<br>• ಭತ್ತದ ಕೊಯ್ಲು ನಂತರ ಉಳಿಕೆ ತೇವಾಂಶಕ್ಕೆ ಎಣ್ಣೆ ಕಾಳು; ದ್ವಿದಳ ಧಾನ್ಯಗಳನ್ನು ಬೆಳೆಯಲು ಮಾರ್ಗೋಪಾಯಗಳನ್ನು ಕೊಡಲಾಗಿದೆ.<br><br>**ಕೃಷಿ ಇಲಾಖೆಯ** ಕರಾವಳಿ ಜಿಲ್ಲೆಗಳಲ್ಲಿ ಆಹಾರ ಬೆಳೆಗಳ ಕೃಷಿ ವ್ಯಾಪ್ತಿಯನ್ನು ಹೆಚ್ಚಿಸಲು ಕೇಂದ್ರ ಪುರಸ್ಕೃತ ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯಡಿಯಲ್ಲಿ ಅಕ್ಕಿ, ದ್ವಿದಳಧಾನ್ಯ, TRFA – ದ್ವಿದಳ ಧಾನ್ಯ ಮತ್ತು TRFA – ಎಣ್ಣೆಕಾಳು ಬೆಳೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ತಾಲ್ಲೂಕುವಾರು ವಿವರ **ಅನುಬಂಧ 3** ರಲ್ಲಿ ಲಗತ್ತಿಸಿದೆ. |
| (ಉ) | ಕರಾವಳಿ ಜಿಲ್ಲೆಗಳಲ್ಲಿ ಕೃಷಿ ಯಾಂತ್ರೀಕತೆಯನ್ನು ಉತ್ತೇಜಿಸಲು ಸರ್ಕಾರದ ಕ್ರಮಗಳೇನು; ಕೃಷಿ ಪ್ರದೇಶಗಳಿಗೆ ಸರ್ವಋತು ರಸ್ತೆ ಸಂಪರ್ಕ ಕಲ್ಪಿಸಲು ಏನು ಕ್ರಮವಹಿಸಿದೆ? (ತಾಲ್ಲೂಕುವಾರು ವಿವರ ನೀಡುವುದು) | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ** ಕರಾವಳಿ ಜಿಲ್ಲೆಗಳಲ್ಲಿ ಕೃಷಿಯಲ್ಲಿ ಯಾಂತ್ರಿಕತೆಯನ್ನು ಬಳಸಲು ತಂತ್ರಜ್ಞಾನದ ಜೊತೆಗೆ ಇಲಾಖೆಗಳಲ್ಲಿ ದೊರೆಯುವ ಯಂತ್ರಗಳ ಲಭ್ಯತೆ ಹಾಗೂ ಅದಕ್ಕೆ ಸಿಗುವ ಸಹಾಯಧನದ ಬಗ್ಗೆ ವಿವರ ನೀಡಲಾಗುತ್ತಿದೆ ಮತ್ತು ಕೃಷಿಯಲ್ಲಿ ಯಾಂತ್ರಿಕತೆಗಳಿದ ಆಗುವ ಲಾಭವನ್ನು ರೈತರಿಗೆ ತಿಳಿಸಿಕೊಡಲಾಗುತ್ತದೆ.<br>• ಭತ್ತದ ಯಾಂತ್ರೀಕೃತ ನಾಟಿ ಪದ್ಧತಿಯನ್ನು ಪರಿಚಯಿಸಲಾಗಿದೆ.<br>• ಭತ್ತದ ಬೆಳೆಯಲ್ಲಿ ಯಾಂತ್ರೀಚಾಲಿತ ಕೊನೋವಿಡರ್ ಪರಿಚಯಿಸಲಾಗಿದೆ.<br>• ಬೆಳೆಯಲ್ಲಿ ಶೇಂಗಾ ಬಿಡಿಸಲು ಯಂತ್ರವನ್ನು ಅನ್ವೇಷಣೆ ಮಾಡಿ ಪರಿಚಯಿಸಲಾಗಿದೆ.<br>**ಕೃಷಿ ಇಲಾಖೆಗೆ** ಸಂಬಂಧಿಸಿದಂತೆ ಕೃಷಿ |

ಯಾಂತ್ರೀಕತೆಯನ್ನು ಉತ್ತೇಜಿಸಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

ಈ ಯೋಜನೆಯಡಿ ಭೂಮಿ ಸಿದ್ಧತೆಯಿಂದ ಹಿಡಿದು ಕೊಯ್ಲು ಹಾಗೂ ಸಂಸ್ಕರಣೆಯವರೆಗೆ ಅಗತ್ಯವಿರುವ ಟ್ರ್ಯಾಕ್ಟರ್ ಹಾಗೂ ಪವರ್ ಟಿಲ್ಲರ್ ಒಳಗೊಂಡಂತಡ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನ ದಡಿ ಒದಗಿಸಲಾಗುತ್ತಿದೆ. ಟ್ರಾಕ್ಟರ್ ಗಳಿಗೆ (45 ಪಿ.ಟಿ.ಒ ಹೆಚ್. ಪಿ ಯವರೆಗೆ) ಸಾಮಾನ್ಯ ರೈತರಿಗೆ ರೂ.0.75 ಲಕ್ಷ ಹಾಗು ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಶೇ.90 ಗರಿಷ್ಟ ರೂ.3.00 ಲಕ್ಷ ಸಹಾಯಧನವನ್ನು ಹಾಗೂ ವಿವಿಧ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.90 ರಂತೆ ಗರಿಷ್ಟ ರೂ.1.00 ಲಕ್ಷದವರೆಗೆ. ಸಹಾಯಧನ ವನ್ನು ನೀಡಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕೃಷಿ ಯಾಂತ್ರೀಕರಣವನ್ನು ಉತ್ತೇಜಿಸಲು ವಿವಿಧ ಕೃಷಿ ಯಾಂತ್ರೀಕರಣ ಯೋಜನೆಗಳಡಿ , ಈ ಕೆಳಗಿನಂತೆ ಕಾರ್ಯಕ್ರಮ ಒದಗಿಸಲಾಗಿದೆ.

(ಆರ್ಥಿಕ: ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಒದಗಿಸಿದ ಕಾರ್ಯಕ್ರಮ |
|---|---|---|
| 1 | ದಕ್ಷಿಣ ಕನ್ನಡ | 338.91 |
| 2 | ಉತ್ತರ ಕನ್ನಡ | 757.18 |
| 3 | ಉಡುಪಿ | 267.85 |
| | ಒಟ್ಟು | **1363.94** |

ಇ-ಸಂಖ್ಯೆ: AGRI/14/AUM/2023

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

# ಅನುಬಂಧ - I

## ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

| ಜಿಲ್ಲೆ | ತರಬೇತಿ ಕಾರ್ಯಕ್ರಗಳು | | | | | | ಕ್ಷೇತ್ರ ಪ್ರಯೋಗಗಳು | | | | | | ಮುಂಚೂಣಿ ಪ್ರಾತ್ಯಕ್ಷಿಕೆಗಳು | | | | | | ಕ್ಷೇತ್ರೋತ್ಸವ / ಕೃಷಿಮೇಳ* | | | | | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | 2019-20 | | 2020-21 | | 2021-22 | | 2019-20 | | 2020-21 | | 2021-22 | | 2019-20 | | 2020-21 | | 2021-22 | | 2019-20 | | 2020-21 | | 2021-22 | | ಸಂ | ವಿ(ಹೆ)/ರೈಸಂ |
| | ಸಂ. | ರೈ.ಸಂ | ಸಂ. | ರೈ.ಸಂ | ಸಂ. | ರೈ.ಸಂ | ಸಂ. | ರೈ.ಸ | ಸಂ. | ರೈಸಂ | ಸಂ. | ರೈಸಂ | ಸಂ. | ವಿ(ಹೆ) | ಸಂ. | ವಿ(ಹೆ) | ಸಂ | ವಿ(ಹೆ) | ಸಂ. | ರೈಸಂ | ಸಂ. | ರೈಸಂ | ಸಂ. | ರೈಸಂ | | |
| ಬೆಂಗಳೂರು ಗ್ರಾಮಾಂತರ | 69 | 2898 | 152 | 6737 | 99 | 4594 | 4 | 12 | 3 | 13 | 4 | 16 | 79 | 23.25 | 65 | 16.25 | 73 | 12.85 | 15 | 774 | 5 | 246 | 15 | 749 | 583 | 52.35/ 16039 |
| ಚಿಕ್ಕಬಳ್ಳಾಪುರ | 101 | 2678 | 100 | 2555 | 129 | 4960 | 3 | 9 | 4 | 14 | 8 | 38 | 115 | 26.15 | 145 | 37.15 | 130 | 33.15 | 10 | 196 | 11 | 335 | 11 | 264 | 767 | 96.45/ 11049 |
| ಕೋಲಾರ | 10 | 1352 | 05 | 356 | 21 | 751 | 3 | 8 | 6 | 12 | 3 | 10 | 40 | 16 | 50 | 10 | 30 | 12.0 | 2 | 68 | 4 | 136 | 4 | 156 | 178 | 38.0/ 2849 |
| ರಾಮನಗರ | 69 | 2254 | 102 | 2529 | 85 | 2811 | 12 | 12 | 4 | 14 | 5 | 12 | 130 | 24.5 | 256 | 52.5 | 188 | 71.1 | 3 | 81 | 13 | 398 | 15 | 568 | 882 | 148.1/ 8679 |
| ಹಾಸನ | 52 | 1490 | 53 | 1939 | 61 | 2680 | 4 | 27 | 5 | 33 | 7 | 31 | 152 | 46.4 | 226 | 66.2 | 204 | 59.8 | 5 | 168 | 3 | 158 | 9 | 436 | 781 | 172.4/ 6962 |
| ತುಮಕೂರು | 94 | 3427 | 67 | 2190 | 99 | 3748 | 6 | 26 | 3 | 9 | 27 | 104 | 118 | 28.2 | 127 | 27.2 | 140 | 31.9 | 7 | 256 | 5 | 213 | 14 | 472 | 707 | 87.3/ 10445 |
| ಮಂಡ್ಯ | 76 | 2709 | 80 | 1898 | 74 | 2597 | 2 | 6 | 4 | 12 | 2 | 8 | 150 | 44 | 140 | 33 | 230 | 46.0 | 10 | 418 | 13 | 338 | 9 | 354 | 790 | 123.0/ 8340 |
| ಚಾಮರಾಜನಗರ | 49 | 1091 | 75 | 1631 | 70 | 1832 | 5 | 13 | 15 | 18 | 23 | 96 | 65 | 13.9 | 142 | 37.8 | 210 | 61.4 | 12 | 506 | 12 | 191 | 8 | 247 | 686 | 113.1/ 5625 |
| ಮೈಸೂರು | 21 | 1123 | 29 | 1487 | 57 | 3342 | 9 | 32 | 10 | 48 | 9 | 34 | 15 | 24 | 16 | 36 | 14 | 93.6 | 4 | 236 | 11 | 606 | 5 | 244 | 200 | 153.6/ 7152 |
| ಬೆಂಗಳೂರು ನಗರ** | 40 | 1042 | 21 | 532 | 55 | 1588 | – | – | – | – | – | – | – | – | – | – | – | – | 1 | 1.6ಲಕ್ಷ | 1 | 12.3ಲಕ್ಷ | 1 | 17.3ಲಕ್ಷ | 119 | 31.5ಲಕ್ಷ |
| **ಒಟ್ಟು** | **581** | **20145** | **692** | **22809** | **750** | **30657** | **48** | **145** | **54** | **173** | **88** | **349** | **864** | **246.4** | **1167** | **316.1** | **1219** | **421.8** | **68** | **2703** | **77** | **2621** | **90** | **3490** | **5693** | **984.3/ 32.7ಲಕ್ಷ** |

*ಕೃಷಿಮೇಳ – ಪ್ರತೀವರ್ಷ ಕೃಷಿಮೇಳವನ್ನು ಬೃಹತ್‌ಮಟ್ಟದಲ್ಲಿಜಿಕೆವಿಕೆಆವರಣ. ಬೆಂಗಳೂರು ಇಲ್ಲಿಆಯೋಜಿಸಲಾಗುವುದು ಹಾಗೂ ವಿ.ಸಿ.ಫಾರಂ, ಮಂಡ್ಯದಲ್ಲಿಯೂ ಸಹ ಕೃಷಿಮೇಳವನ್ನು ಆಯೋಜಿಸಲಾಗುತ್ತಿದೆ.

**ಬೆಂಗಳೂರು ನಗರಜಿಲ್ಲೆಯಜಿಕವಿಕೆಆವರಣದಲ್ಲಿ ಕೃವಿವಿಯಕೇಂದ್ರ ಸ್ಥಾನವಾಗಿದ್ದುಇಲ್ಲಿ ಕೃಷಿ ಮಾಹಿತಿತಂತ್ರಜ್ಞಾನಕೇಂದ್ರ, ರೈತತರಬೇತಿಕೇಂದ್ರ, ಸಿಬ್ಬಂದಿ ತರಬೇತಿಕೇಂದ್ರ ಮತ್ತು ಬೇಕರಿತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ರೈತರಿಗೆ ಕೃಷಿ ಸಲಹಾ ಸೇವೆಗಳನ್ನು ಮತ್ತುತರಬೇತಿ ಕಾರ್ಯಕ್ರಮಗಳನ್ನು ಹಾಗೂ ವಿವಿಧ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

## ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಧಾರವಾಡ

### 1. ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು, ರೈತರ ಕ್ಷೇತ್ರ ಪಾಠಶಾಲೆ, ದ್ವಿದಳ ಧಾನ್ಯಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಎಣ್ಣೆಕಾಳು ಬೆಳೆಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೆಡಸಲಾಗುತ್ತದೆ.

### 2. ಕೃಷಿ ವಿಜ್ಞಾನ ಕೇಂದ್ರ, ಶಿರಸಿ

- ಮುಂಚೂಣಿ ಪ್ರಾತ್ಯಕ್ಷಿಕೆಗಳು, ತಂತ್ರಜ್ಞಾನ ಮರು ಪರಿಶೀಲನೆ, ತರಬೇತಿ ಕಾರ್ಯಕ್ರಮಗಳು, ಕಾರ್ಯಾಗಾರ, ಪದ್ಧತಿ ಪ್ರಾತ್ಯಕ್ಷಿಕೆ, ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಜಾಗೃತಿ ಕಾರ್ಯಕ್ರಮ.
- ಕೃಷಿ ವಿಸ್ತರಣೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗೆ ಹೊಸ ತಳಿಗಳು, ಹೊಸ ತಂತ್ರಜ್ಞಾನಗಳ ಬಗ್ಗೆ ಮುಂಚೂಣಿ ಪ್ರಾತ್ಯಕ್ಷಿಕೆಗಳು ಹಾಗೂ ಇತರೆ ಪ್ರಚಾರ ಕಾರ್ಯಕ್ರಮಗಳನ್ನು ಮಾಹಿತಿ ನೀಡಿ ಉತ್ಪಾದನಾ ಕ್ಷಮತೆಯನ್ನು ರೈತರ ಹೊಲ ಗದ್ದೆಗಳಲ್ಲಿ ತೋರಿಸಿ ಕೊಡಲಾಗುತ್ತದೆ.

### 3. ಕೃಷಿ ವಿಜ್ಞಾನ ಕೇಂದ್ರ, ಹಾವೇರಿ (ಹನುಮನಮಟ್ಟಿ)

2022-23 ರಲ್ಲಿ ವಿವಿಧ ಕೃಷಿ ತಾಂತ್ರಿಕತೆಗಳ 21 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 210 ರೈತರ ತಾಕುಗಳಲ್ಲಿ 09

ಕ್ಷೇತ್ರ ಪರೀಕ್ಷೆಗಳನ್ನು 30 ರೈತರ ತಾಕುಗಳಲ್ಲಿ ಮತ್ತು ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು ಬೆಳೆಗಳ ಸಮಗ್ರ ನಿರ್ವಹಣೆಯ 04 ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಒಟ್ಟು 160 ರೈತರ ತಾಕುಗಳಲ್ಲಿ ಕೈಗೊಳ್ಳಲಾಗಿದೆ. ಒಟ್ಟು 44 ಒಳ ಆವರಣ ಮತ್ತು 53 ಹೊರ ಆವರಣ ತರಬೇತಿಗಳ ಮೂಲಕ 2906 ರೈತರಿಗೆ ಬೆಳೆ ಮತ್ತು ಮಣ್ಣು ನಿರ್ವಹಣೆಯ ಮಾಹಿತಿ ನೀಡಲಾಗಿದೆ. ಜಿಲ್ಲಾ ಕೃಷಿ ಹವಾಮಾನ ಘಟಕದಿಂದ ತಾಲ್ಲೂಕಾವಾರು ವ್ಯಾಟ್ಸಪ್ ಗುಂಪುಗಳ ಮೂಲಕ ವಾರದಲ್ಲಿ 02 ಬಾರಿ ಹವಾಮಾನ ಆಧಾರಿತ ಕೃಷಿ ಸಲಹೆಗಳನ್ನು ನೀಡಲಾಗಿದೆ

### 4 .ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಇಂಡಿ

2022-23 ನೇ ಸಾಲಿನಲ್ಲಿ ಕೈಗೊಂಡಿರುವ ತಾಂತ್ರಿಕ ಕಾರ್ಯಕ್ರಮಗಳ ವಿವರ: ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು, ರೈತ ಕ್ಷೇತ್ರ ಪಾಠಶಾಲೆ, ದ್ವಿದಳ ಧಾನ್ಯಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಎಣ್ಣೆಕಾಳು ಬೆಳೆಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಕೃಷಿ ವಿಸ್ತರಣಾ ಚಟುವಟಿಕೆಗಳಾದ ಕ್ಷೇತ್ರೋತ್ಸವಗಳು-5, ಕ್ಷೇತ್ರ ಭೇಟಿ-54, ಪದ್ಧತಿ ಪ್ರಾತ್ಯಕ್ಷಿಕೆ-02, ಗುಂಪು ಚರ್ಚೆ-09, ಸಂಪನ್ಮೂಲ ವ್ಯಕ್ತಿಗಳಾಗಿ-12, ವಸ್ತು ಪ್ರದರ್ಶನ-04, ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಣೆ-12, ಆಕಾಶವಾಣಿಯಲ್ಲಿ ಮಾಹಿತಿ ಪ್ರಸರಣ-02, ದೂರವಾನಿ ಮುಖಾಂತರ ರೈತರಿಗೆ ಸಲಹೆ-625, ವಿಸ್ತರಣಾ ಪತ್ರಿಕೆಗಳು-7

### 5 .ಐ.ಸಿಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ವಿಜಯಪುರ

2022-23 ನೇ ಸಾಲಿನಲ್ಲಿ ಕೈಗೊಂಡಿರುವ ತಾಂತ್ರಿಕ ಕಾರ್ಯಕ್ರಮಗಳ ವಿವರ: ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು, ರೈತ ಕ್ಷೇತ್ರ ಪಾಠಶಾಲೆ, ದ್ವಿದಳ ಧಾನ್ಯಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಎಣ್ಣೆಕಾಳು ಬೆಳೆಗಳ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಕೃಷಿ ವಿಸ್ತರಣಾ ಚಟುವಟಿಕೆಗಳಾದ ಕ್ಷೇತ್ರೋತ್ಸವಗಳು-5, ಕ್ಷೇತ್ರ ಭೇಟಿ-54, ಪದ್ಧತಿ ಪ್ರಾತ್ಯಕ್ಷಿಕೆ-02, ಗುಂಪು ಚರ್ಚೆ-09, ಸಂಪನ್ಮೂಲ ವ್ಯಕ್ತಿಗಳಾಗಿ-12, ವಸ್ತು ಪ್ರದರ್ಶನ-04, ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಣೆ-12, ಆಕಾಶವಾಣಿಯಲ್ಲಿ ಮಾಹಿತಿ ಪ್ರಸರಣ-02, ದೂರವಾಣಿ ಮುಖಾಂತರ ರೈತರಿಗೆ ಸಲಹೆ-625, ವಿಸ್ತರಣಾ ಪತ್ರಿಕೆಗಳು-7

**6. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ವಿಜಯಪುರ**

ವಿಸ್ತರಣಾ ಚಟುವಟಿಕೆಗಳು: ಕ್ಷೇತ್ರೋತ್ಸವ, ಕೃಷಿ ಸಖಿ ತರಬೇತಿ ಕಾರ್ಯಕ್ರಮ, ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರತಿದಿನ "ಕೃಷಿ ಮಿತ್ರ" ಅಂಕಣದಲ್ಲಿ ಕೃಷಿ ಸಲಹೆ ನೀಡುವುದು. ಮಣ್ಣಿನ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ ಕೃಷಿ ಮೇಳ

**7. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕುಮಟಾ**

ವಿಸ್ತರಣಾ ಚಟುವಟಿಕೆಗಳು: ಪ್ರಾತ್ಯಕ್ಷಿಕೆಗಳು, ತರಬೇತಿ ಕಾರ್ಯಕ್ರಮಗಳು, ರೈತರ ಹೊಲಗಳಿಗೆ ಭೇಟಿ

**8. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಗದಗ**

ವಿಸ್ತರಣಾ ಚಟುವಟಿಕೆಗಳು: ಕ್ಷೇತ್ರಪ್ರಾತ್ಯಕ್ಷಿಕೆಗಳು, ಬೆಳೆ ಕ್ಷೇತ್ರೋತ್ಸವ ಸಮಸ್ಯಾತ್ಮಕ ಕ್ಷೇತ್ರಗಳ ಭೇಟಿ, ತರಬೇತಿ ಕಾರ್ಯಕ್ರಮಗಳು.

# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

| ಕ್ರ.ಸಂ. | ಚಟುವಟಿಕೆಗಳು | ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ | | ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗ | | ಕೃಷಿ ವಿಜ್ಞಾನ ಕೇಂದ್ರ, ಉಡುಪಿ | | ಕೃಷಿ ವಿಜ್ಞಾನ ಕೇಂದ್ರ, ಚಿಕ್ಕಮಗಳೂರು | | ವಿಸ್ತರಣಾ ಶಿಕ್ಷಣ ಘಟಕ, ದಾವಣಗೆರೆ | | ವಿಸ್ತರಣಾ ಶಿಕ್ಷಣ ಘಟಕ, ಮಡಿಕೇರಿ | |
|---|---|---|---|---|---|---|---|---|---|---|---|---|---|
| | | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು | ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿ ಒಟ್ಟು ರೈತರು |
| 1. | ಕ್ಷೇತ್ರೋತ್ಸವ | 7 | 2150 | 26 | 927 | 4 | 426 | 13 | 690 | 02 | 186 | 04 | 850 |
| 2. | ಗುಂಪು ಚರ್ಚೆ | 30 | 319 | 8 | 122 | 27 | 514 | 02 | 22 | 04 | 126 | 03 | 185 |
| 3. | ಕಛೇರಿ ಭೇಟಿ (ರೈತರಭೇಟಿ) | 1009 | | 5397 | | 852 | | 1173 | | 237 | | 128 | |
| 4. | ಕ್ಷೇತ್ರ ಭೇಟಿ (ರೈತರ ತಾಕುಗಳಿಗೆ ವಿಜ್ಞಾನಿಗಳಭೇಟಿ) | 175 | 377 | 313 | 394 | 120 | 598 | 217 | 352 | 37 | 59 | 42 | 72 |
| 5. | ದೂರವಾಣಿ ಕರೆಗಳು | 1288 | 1288 | 3730 | 3730 | 12042 | 12042 | 5192 | 5192 | 115 | 116 | 175 | 175 |
| 6. | ಸಮಸ್ಯಾತ್ಮಕಕ್ಷೇತ್ರಗಳಿಗೆ ಭೇಟಿ | 152 | 705 | 72 | 221 | 27 | 78 | 84 | 195 | 06 | 13 | 18 | 35 |
| 7. | ವಿಸ್ತರಣಾ ಲೇಖನ ಬಿಡುಗಡೆ (ಫೋಲ್ಡರ್/ ಪುಸ್ತಕ ಇತ್ಯಾದಿ) | 15 | - | 13 | - | 6 | | 59 | - | 04 | - | 03 | - |
| 8. | ರೇಡಿಯೋ ಕಾರ್ಯಕ್ರಮ | 62 | - | 31 | - | 17 | | 67 | | 09 | - | 06 | |
| 9. | ಟಿವಿ ಕಾರ್ಯಕ್ರಮ | 04 | - | 06 | - | 6 | | 12 | | 02 | - | 01 | |
| 10. | ವಿಡಿಯೋ/ ಸಿಡಿ | 18 | - | 9 | - | 12 | | 04 | | 1 | - | - | |
| 11. | ವಸ್ತು ಪ್ರದರ್ಶನದಲ್ಲಿಭಾಗವಹಿಸುವಿಕೆ | 3 | 6949 | 4 | 14240 | 8 | 9287 | 04 | 827 | 02 | 350 | 02 | 265 |
| 12. | ವಿಚಾರ ಸಂಕಿರಣ/ ಕಾರ್ಯಗಾರ | 6 | 564 | 8 | 385 | 9 | 538 | 10 | 644 | 04 | 92 | 03 | 76 |
| 13. | ರೈತ ವಿಜ್ಞಾನಿಸಂವಾದ | 2 | 171 | 47 | 688 | 6 | 168 | 904 | 110 | 0[illegible] | 42 | 02 | 62 |

## ತಂತ್ರಜ್ಞಾನ ಮರು ಪರಿಶೀಲನಾ ಪ್ರಯೋಗಗಳು

| ಕ್ರ. ಸಂ. | ಬೆಳೆ | ಮರು ಪರಿಶೀಲಿಸಿದ ತಂತ್ರಜ್ಞಾನ | ಪ್ರಯೋಗಗಳ ಸಂಖ್ಯೆ | ರೈತರ ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| 1. | ಭತ್ತ | ಭತ್ತದ ಸುಧಾರಿತ ಸಣ್ಣ ಅಕ್ಕಿ ತಳಿಗಳ ಮೌಲ್ಯಮಾಪನ | 3 | 3 | 1.20 |
| 2. | ಶೇಂಗಾ | ಸೀಮಿತ ನೀರಾವರಿ ಶೇಂಗಾ ಬೆಳೆಯಲ್ಲಿ ವಿವಿಧ ತಳಿಗಳ ಇಳುವರಿ ಸಾಮರ್ಥ್ಯ ತುಲನೆ | 3 | 3 | 1.2 |
| 3. | ಮೆಕ್ಕೆಜೋಳ | ಮೆಕ್ಕೆಜೋಳದ ಬೆಳವಣಿಗೆ ಮತ್ತು ಇಳುವರಿಯ ಮೇಲೆ ನ್ಯಾನೋ ರಸಗೊಬ್ಬರದ (ಸಾರಜನಕ ಮತ್ತು ಸತು) ಪರಿಣಾಮ | 3 | 3 | 0.9 |
| 4. | ಟೊಮ್ಯಾಟೋ | ಟೊಮ್ಯಾಟೋದ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಸಮುದ್ರದ ಕಳೆಯ ದ್ರವಗೊಬ್ಬರದ ಪರಿಣಾಮ | 3 | 3 | 0.9 |
| 5. | ಬೆಂಡೆ ಕಾಯಿ | ಬೆಂಡೆ ಸಂಕರಣ ತಳಿಗಳ ಅಳವಡಿಕೆಗೆ ಮೌಲ್ಯಮಾಪನ | 3 | 3 | 1.2 |
| 6. | ಟೊಮ್ಯಾಟೋ | ಟೊಮ್ಯಾಟೋ ಹಣ್ಣಿನ ತೊಟ್ಟಿನ ಸುತ್ತ ಕೊಳೆಯುವಿಕೆ ಮತ್ತು ಹಣ್ಣಿನ ಬಿರುಕು ಬಿಡುವಿಕೆಯ ನಿರ್ವಹಣೆಯಿಂದ ಇಳುವರಿ ಹೆಚ್ಚಿಸುವುದು | 3 | 3 | 0.6 |
| 7. | ಬೆಂಡೆ ಕಾಯಿ | ಬೆಂಡೆಯ ಸುಳಿ ಹಾಗೂ ಕಾಯಿ ಕೊರಕದ ನಿರ್ವಹಣೆ | 5 | 5 | 0.8 |
| 8. | ಯಾಂತ್ರೀಕರಣ | ಅಡಿಕೆ ಮರ ಹತ್ತುವ ಸಾಧನದ ಮೌಲ್ಯಮಾಪನ | 10 | 10 | 0 |
| 9. | ಹಿತ್ತಲು ಕೋಳಿ | ಕಡಕ್ ನಾಥ್ ಕೋಳಿ ಬೆಳವಣಿಗೆ ಕಾರ್ಯಕ್ಷಮತೆಯನ್ನು ಇತರ ಹಿತ್ತಲು ಕೋಳಿಗಳ ಜೊತೆ ತುಲನಾತ್ಮಕ ಅಧ್ಯಯನದ ಮೌಲ್ಯಮಾಪನ | 4 (100 ಮರಿಗಳು) | 4 (100 ಮರಿಗಳು) | 4 ಘಟಕಗಳು |

| ಕ್ರ. ಸಂ. | ಬೆಳೆ | ಮರು ಪರಿಶೀಲಿಸಿದ ತಂತ್ರಜ್ಞಾನ | ಪ್ರಯೋಗಗಳ ಸಂಖ್ಯೆ | ರೈತರ ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| 10. | ಹೈನುಗಾರಿಕೆ | ಹೈನುರಾಸುಗಳ ಆಹಾರದಲ್ಲಿ ಬೇವು ಲೇಪಿತ ಯೂರಿಯ ಬಳಕೆಯ ಮೌಲ್ಯಮಾಪನ | 5 | 5 | 5 ಘಟಕಗಳು |
| 11. | ಮೆಣಸಿನಕಾಯಿ | ಎಲೆ ಮುರುಟು ರೋಗದ ವಿರುದ್ಧ ಮೆಣಸಿನಕಾಯಿ ತಳಿಗಳ ಮೌಲ್ಯಮಾಪನ | 05 | 05 | 0.25 |
| 12. | ಮೆಕ್ಕೆಜೋಳ | ಮೆಕ್ಕೆಜೋಳದ ಬೆಳವಣಿಗೆ ಮತ್ತು ಇಳುವರಿಯ ಮೇಲೆ ನ್ಯಾನೋ ಗೊಬ್ಬರದ (ಸಾರಜನಕ ಮತ್ತು ಸತು) ಮೌಲ್ಯಮಾಪನ | 05 | 05 | 1.0 |
| 13. | ಅಡಿಕೆ | ಅಡಿಕೆಯ ಸಿಪ್ಪೆ ಕೊಳೆಯಲು ವಿವಿಧ ಕಾಂಪೋಸ್ಟ್ ಕಲ್ಚರ್‌ನ ಮೌಲ್ಯಮಾಪನ | 05 | 05 | 0 |
| 14. | ಕಾಳುಮೆಣಸು | ಶೀಘ್ರ ಸೊರಗು ರೋಗ ನಿರೋಧಕ ವಿವಿಧ ಕಾಳುಮೆಣಸಿನ ತಳಿಗಳ ಮೌಲ್ಯಮಾಪನ | 05 | 05 | 0.50 |
| 15. | ಹೂವಿನ ಬೆಳೆ | ಅಡಿಕೆ (0-4 ವರ್ಷದ) ತೋಟದಲ್ಲಿ ಹೂವಿನ ಬೆಳೆಗಳ ಮೌಲ್ಯಮಾಪನ | 05 | 05 | 0.25 |
| | ಅಡಿಕೆ ಮರ ಹತ್ತುವ ಸಾಧನ | ಅಡಿಕೆ ಮರ ಹತ್ತುವ ಸಾಧನ | 15 | 15 | 0 |
| 17. | ಮೆಕ್ಕೆಜೋಳ | ಮೆಕ್ಕೆಜೋಳದ ಬೆಳವಣಿಗೆ ಹಾಗೂ ಇಳುವರಿಯ ಮೇಲೆ ನ್ಯಾನೋ ರಸಗೊಬ್ಬರಗಳಾದ (ಸಾರಜನಕ ಹಾಗೂ ಸತುವಿನ ಮೌಲ್ಯಮಾಪನ) | 20 | 20 | 10 |
| 18. | ಕಾಂಪೋಸ್ಟ್ | ಕಾಂಪೋಸ್ಟ್ ಉತ್ಪಾದನೆಗೆ ವಿವಿಧ ಸೂಕ್ಷ್ಮಜೀವಿಗಳ ಮಿಶ್ರಣದ ಕಾಂಪೋಸ್ಟ್ ಕಲ್ಚರ್ ಗಳ ಮೌಲ್ಯಮಾಪನ | 5 | 5 | 0.05 |
| 19. | ಸುವರ್ಣ ಗಡ್ಡೆ | ಸುವರ್ಣಗಡ್ಡೆಯಲ್ಲಿ ಬೀಜದ ಗಡ್ಡೆಗಳ ಪ್ರಮಾಣವನ್ನು ಕಡಿಮೆ ಮಾಡುವ ತಂತ್ರಜ್ಞಾನ ಪ್ರಾತ್ಯಕ್ಷಿಕೆ | 5 | 5 | 2 |
| 20. | ಕಾಳುಮೆಣಸು | ಅಡಿಕೆ ಬೆಳೆ ಪದ್ಧತಿಯಲ್ಲಿ ಅಧಿಕ ಇಳುವರಿ ಕಾಳುಮೆಣಸು ತಳಿಗಳ ತಂತ್ರಜ್ಞಾನ ಪರಿಶೀಲನಾ ಪ್ರಾತ್ಯಕ್ಷಿಕೆ | 5 | 5 | 0.5 |
| 21. | ಕಲ್ಲಂಗಡಿ | ಕರಾವಳಿ ಕರ್ನಾಟಕದಲ್ಲಿ ಕಲ್ಲಂಗಡಿಯಲ್ಲಿ ಪೌಷ್ಠಿಕಾಂಶದ ಅಗತ್ಯತೆಯ ಮೌಲ್ಯಮಾಪನ | 3 | 3 | 1 |
| 22. | ತೆಂಗು | ತೆಂಗಿನಲ್ಲಿ ರುಗೋಸ್ ಸುರುಳಿ ಸುತ್ತುವ ಬಿಳಿನೊಣದ ನಿರ್ವಹಣೆಯ ಮೌಲ್ಯಮಾಪನ | 5 | 5 | 5 |
| 23. | ಮೀನು | ಕಳೆ ಮೀನು ಆವ್ರುತ ಕೃಷಿ ಹೊಂಡಗಳಲ್ಲಿ ಮುರಲ್ ಮೀನುಗಳ ಬೆಳವಣಿಗೆ ಕಾರ್ಯಕ್ಷಮತೆಯ ಮೌಲ್ಯಮಾಪನ. | 4 | 4 | 1.5 |
| 24. | ಅಲಸಂದೆ | ಮೀಟರ್ ಅಲಸಂದೆ ಬೆಳೆಯಲ್ಲಿ ಸಾವಯವ ವಿಧಾನಗಳಿಂದ ಕಾಯಿಕೊರಕ ನಿರ್ವಹಣೆಯ ತಂತ್ರಜ್ಞಾನ ಪರಿಶೀಲನಾ | 5 | 5 | 2.5 |

| ಕ್ರ. ಸಂ. | ಬೆಳೆ | ಮರು ಪರಿಶೀಲಿಸಿದ ತಂತ್ರಜ್ಞಾನ | ಪ್ರಯೋಗಗಳ ಸಂಖ್ಯೆ | ರೈತರ ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| | | ಪ್ರಾತ್ಯಕ್ಷಿಕೆ | | | |
| 25. | ಬಿದಿರು | ಭತ್ತದ ಖಾಲಿ ಜಾಗದಲ್ಲಿ ಬಿದಿರು ಬೆಳೆಯ ಆರ್ಥಿಕ ಮತ್ತು ಪರಿಸರಕ್ಕೆ ಸೂಕ್ತ ತಂತ್ರಜ್ಞಾನ ಪರಿಶೀಲನಾ ಪ್ರಾತ್ಯಕ್ಷಿಕೆ | 5 | 5 | 5 |
| 26. | ಮೆಕ್ಕೆಜೋಳ | ನ್ಯಾನೋ ಗೊಬ್ಬರ ಬಳಕೆಯಿಂದ ಮೆಕ್ಕೆಜೋಳದ ಬೆಳವಣಿಗೆ ಮತ್ತು ಇಳುವರಿ ಮೇಲೆ ಆಗುವ ಪರಿಣಾಮದ ವಿಶ್ಲೇಷಣೆ | 3 | 3 | 1.8 |
| 27. | ತೊಗರಿ | ಬಂಜೆ ರೋಗದ ಪ್ರತಿಕ್ರಿಯೆ ತಿಳಿಯಲು ತೊಗರಿ ಬೆಳೆಯ ತಳಿಗಳ ವಿಶ್ಲೇಷಣೆ | 2 | 2 | 1.2 |
| 28. | ಈರುಳ್ಳಿ | ಮುಂಗಾರು ಹಂಗಾಮಿನಲ್ಲಿ ಈರುಳ್ಳಿ ಬೆಳೆಯ ಅಧಿಕ ಇಳುವರಿಗೆ ಗಂಧಕದ ಬಳಕೆಯ ವಿಶ್ಲೇಷಣೆ | 2 | 2 | 0.8 |
| 29. | ಕಲ್ಲಂಗಡಿ | ಅಧಿಕ ಇಳುವರಿಗಾಗಿ ಕಲ್ಲಂಗಡಿ ಸಂಕರಣ ತಳಿಗಳ ವಿಶ್ಲೇಷಣೆ | 3 | 3 | 1.2 |
| 30. | - | ಅಡಿಕೆ ಸಿಪ್ಪೆ ಗೊಬ್ಬರ ಮಾಡಲು ವಿವಿಧ ಕಾಂಪೋಷ್ಟ ಅಣುಜೀವಿ ಬಳಕೆಯ ವಿಶ್ಲೇಷಣೆ | 3 | 3 | 2.0 |

**ಮುಂಚೂಣಿಪ್ರಾತ್ಯಕ್ಷಿಕೆಗಳು**

| ಕ್ರ. ಸಂ | ಬೆಳೆ | ಪರಿಚಯಿಸಿದ ತಂತ್ರಜ್ಞಾನ | ಪ್ರಯೋಗಗಳ ಸಂಖ್ಯೆ | ರೈತರ ಸಂಖ್ಯೆ | ವಿಸ್ತೀರ್ಣ |
|---|---|---|---|---|---|
| 1. | ರಾಗಿ | ರಾಗಿ ತಳಿ ಕೆ.ಎಂ.ಆರ್.-630 ರ ಪ್ರಾತ್ಯಕ್ಷಿಕೆ | 10 | 10 | 4.0 |
| 2. | ಭತ್ತ | ನೇರ ಭತ್ತ ಬಿತ್ತನೆ ಪದ್ಧತಿ ಪ್ರಾತ್ಯಕ್ಷಿಕೆ | 10 | 10 | 4.0 |
| 3. | ಮೆಕ್ಕೆಜೋಳ | ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ | 5 | 5 | 2.0 |
| 4. | ಅಲಸಂದೆ | ಅಲಸಂದೆ ತಳಿ ಯು.ಎ.ಹೆಚ್.ಎಸ್.-28ರ ಪ್ರಾತ್ಯಕ್ಷಿಕೆ | 10 | 10 | 4.0 |
| 5. | ಟೊಮ್ಯಾಟೋ | ಟೊಮ್ಯಾಟೋ ಬೆಳೆಯಲ್ಲಿ ಹನಿ ನೀರಾವರಿ ಮೂಲಕ ಗೊಬ್ಬರಗಳ ಪರಿಣಾಮಕಾರಿ ಬಳಕೆಯ ಪ್ರಾತ್ಯಕ್ಷಿಕೆ | 5 | 5 | 2.0 |
| 6. | ಶುಂಠಿ | ಶುಂಠಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 5 | 5 | 2.0 |
| 7. | ಎಲೆಕೋಸು | ಎಲೆಕೋಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | 5 | 5 | 2.0 |

| | | | | | |
|---|---|---|---|---|---|
| 8. | ಮಾವು | ಮಾವಿನಲ್ಲಿ ಜಿಗಿಹುಳು ಹಾಗೂ ಬೂದುರೋಗದ ನಿರ್ವಹಣೆ | 7 | 7 | 0.7 |
| 9. | ಅನಾನಸ್ | ಅನಾನಸ್ ಬೆಳೆಯಲ್ಲಿ ಸುಳಿಕೊಳೆ ರೋಗದ ನಿರ್ವಹಣೆ | 5 | 5 | 2.0 |
| 10. | ಟೊಮ್ಯಾಟೋ | ಟೊಮ್ಯಾಟೋ ಬೆಳೆಯಲ್ಲಿ ಎಲೆ ಸುರಂಗದ ಹುಳು ಹಾಗೂ ಹಣ್ಣು ಕೊರೆಯುವ ಹುಳುವಿನ ನಿರ್ವಹಣೆ | 10 | 10 | 4.0 |
| 11. | ಭತ್ತ | ಭತ್ತದಲ್ಲಿ ಸಮಗ್ರ ಕೀಟ ಹಾಗೂ ರೋಗಗಳ ನಿರ್ವಹಣೆ | 8 | 8 | 3.2 |
| 12. | ಅಡಿಕೆ | ಅಡಿಕೆ ಸಿಪ್ಪೆಯಿಂದ ಕಾಂಪೋಸ್ಟ್ ಗೊಬ್ಬರ ಮಾಡುವ ಪ್ರಾತ್ಯಕ್ಷಿಕೆ | 20 | 20 | 20 ಘಟಕಗಳು |
| 13. | ಮೇವಿನ ಬೆಳೆ | ಅಧಿಕ ಮೇವು ಇಳುವರಿಗಾಗಿ COFS-31ನ ಮೇವಿನ ಪ್ರಾತ್ಯಕ್ಷಿಕೆ | 6 | 6 | 2.5 |
| 14. | ಅನಾನಸ್ | ಅನಾನಸ್ ಜಾಮ್ ತಯಾರಿಸುವ ಕುರಿತು ಪ್ರಾತ್ಯಕ್ಷಿಕೆ | 4 | 4 | 4 ಜನ |
| 15. | ಹೈನುಗಾರಿಕೆ | ಹೈನುರಾಸುಗಳಲ್ಲಿ ಸಂತಾನೋತ್ಪತ್ತಿ ಸಮಸ್ಯೆಗಳ ಸಮಗ್ರ ನಿರ್ವಹಣೆ | 10 | 10 | 10 ರಾಸುಗಳು |
| 16. | ಹೈನುಗಾರಿಕೆ | ಕ್ಯಾಲಿಫೋರ್ನಿಯಾ ಕೆಚ್ಚಲು ಬಾವು ಪರೀಕ್ಷೆಯಿಂದ ಕೆಚ್ಚಲು ಬಾವು ಪರೀಕ್ಷೆ ಪ್ರಾತ್ಯಕ್ಷಿಕೆ | 10 | 10 | 10 ರಾಸುಗಳು |
| 17. | ಹೈನುಗಾರಿಕೆ | ಗ್ರಾಮೀಣ ನಿರ್ವಹಣಾ ಪದ್ಧತಿಗಳ ಹೈನುರಾಸುಗಳಿಗೆ ಮೊಲಾಸಸ್ ಖನಿಜ ಬ್ಲಾಕ್ ಪೂರೈಕೆ ಪ್ರಾತ್ಯಕ್ಷಿಕೆ | 10 | 10 | 10 ರಾಸುಗಳು |
| 18. | ಭತ್ತ | ಅಧಿಕ ಇಳುವರಿ ಭತ್ತದ ತಳಿ ಕೆ.ಹೆಚ್.ಪಿ- 13ರ ಪ್ರಾತ್ಯಕ್ಷಿಕೆ | 25 | 25 | 25 |
| 19. | ಶೇಂಗಾ | ಶೇಂಗಾ ಬೆಳೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ | 25 | 25 | 25 |
| 20. | ಅಲಸಂದೆ | ಭತ್ತದ ಕಟಾವಿನ ಗದ್ದೆಗಳಲ್ಲಿ ಅಲಸಂದೆ ಬೆಳೆಯ ಪ್ರಾತ್ಯಕ್ಷಿಕೆ | 5 | 5 | 5 |
| 21. | ಅಡಿಕೆ | ಅಡಿಕೆ ಕಾಯಿ ಒಡೆಯುವಿಕೆಯ ನಿರ್ವಹಣೆ | 10 | 10 | 10 |
| 22. | ಕಾಳುಮೆಣಸು | ಅಧಿಕ ಇಳುವರಿಗಾಗಿ ಕಾಳು ಮೆಣಸಿನ ಸಮಗ್ರ ಬೆಳೆ ನಿರ್ವಹಣೆ | 25 | 25 | 25 |
| 23. | ಮಾಡಹಾಗಲ | ಮಾಡಹಾಗಲ ತಳಿ ಅರ್ಕಾ ಭರತ್ ಪ್ರಾತ್ಯಕ್ಷಿಕೆ | 5 | 5 | 0.25 |
| 24. | ಶುಂಠಿ | ಅಧಿಕ ಇಳುವರಿಗಾಗಿ ಶುಂಠಿ ಬೆಳೆಯಲ್ಲಿ ಶುಂಠಿ ಸ್ಪೆಷಲ್ ಲಘು ಪೋಷಕಾಂಶದ ಪ್ರಾತ್ಯಕ್ಷಿಕೆ | 10 | 10 | 10 |

| | | | | | |
|---|---|---|---|---|---|
| 25. | ಬೀನ್ಸ್ | ಭತ್ತದ ಕಟಾವಿನ ಗದ್ದೆಗಳಲ್ಲಿ ಬೀನ್ಸ್ ಪ್ರಾತ್ಯಕ್ಷಿಕೆ | 20 | 20 | 5 |
| 26. | ಮುಸುಕಿನ ಜೋಳ | ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ನಿರ್ವಹಣೆ | 25 | 25 | 25 |
| 27. | ಟೊಮ್ಯಾಟೋ | ಟೊಮ್ಯಾಟೋ ಬೆಳೆಯಲ್ಲಿ ಎಲೆಸುರುಳಿ ಹುಳುವಿನ ನಿರ್ವಹಣೆ | 25 | 25 | 12.5 |
| 28. | ಕಡಲೆ | ಕಡಲೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 25 | 25 | 25 |
| 29. | ಪೌಷ್ಠಿಕ ಕೈತೋಟ | ಪೌಷ್ಠಿಕಾಂಶದ ಭದ್ರತೆಗೆ ಶಾಲೆಗಳಲ್ಲಿ ಮತ್ತು ರೈತ ಕುಟುಂಬಕ್ಕೆ – ಪೌಷ್ಠಿಕ ಕೈ ತೋಟದ ಪ್ರಾತ್ಯಕ್ಷಿಕೆ | 5 | 5 | 1500ಚ.ಮೀ. |
| 30. | ಭತ್ತ | ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಗೆ ಮುಂಗಾರು ಹಂಗಾಮಿಗೆ ತಗ್ಗು ಪ್ರದೇಶಕ್ಕೆ ಕೆಂಪು ಭತ್ತ ತಳಿ ಸಹ್ಯಾದ್ರಿ ಪಂಚಮುಖಿ ಪರಿಚಯ | 11 | 11 | 10 |
| 31. | | ಉಡುಪಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಭತ್ತದ ಗದ್ದೆಗಳಲ್ಲಿ ಹಳದಿ ಹಸಿರು ಪಾಚಿ ಹಾಗೂ ವಿವಿಧ ಕಳೆ ಪ್ರಭೇದಗಳ ನಿರ್ವಹಣೆ | 12 | 12 | 10 |
| 32. | | ಭತ್ತದ ಬೆಳೆಯಲ್ಲಿ ಅಧಿಕ ಇಳುವರಿ ಹಾಗೂ ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಲು ಕರಾವಳಿ ಪ್ರದೇಶದಲ್ಲಿ ಭತ್ತದಲ್ಲಿ ನೇರ ಬಿತ್ತನೆ ವಿಧಾನದ ಪರಿಚಯ | 20 | 20 | 25 |
| 33. | ಕಾಳುಮೆಣಸು | ಕಾಳುಮೆಣಸಿನಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 10 | 10 | 5 |
| 34. | ತೆಂಗು | ತೆಂಗಿನಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 10 | 10 | 5 |
| 35. | ಅಡಿಕೆ | ಅಡಿಕೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 10 | 10 | 5 |
| 36. | ಮಡಹಾಗಲ | ಅರ್ಕಾ ಭರತ್ ಮಡಹಾಗಲ ತಳಿಯ ಪ್ರಾತ್ಯಕ್ಷಿಕೆ | 10 | 10 | 0.5 |
| 37. | ಉಡುಪಿ ಮಲ್ಲಿಗೆ | ಚಳಿಗಾಲದಲ್ಲಿ ಉಡುಪಿ ಮಲ್ಲಿಗೆ ಇಳುವರಿ ಹೆಚ್ಚಿಸಲು ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ಗಿಡ ಸವರುವಿಕೆಯ ಪ್ರಾತ್ಯಕ್ಷಿಕೆ | 10 | 10 | 0.4 |
| 38. | ಕಲ್ಲಂಗಡಿ | ಕಲ್ಲಂಗಡಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 | 10 | 5 |
| 39. | ಕಾಳುಮೆಣಸು | ಕಾಳುಮೆಣಸಿನಲ್ಲಿ ಶೀಘ್ರ ಸೊರಗು ರೋಗದ ನಿರ್ವಹಣೆ | 5 | 5 | 5 |
| 40. | ಬದನೆ | ಜೈವಿಕ ವಿಧಾನದಲ್ಲಿ ಬದನೆಯಲ್ಲಿ ಕಾಂಡ ಮತ್ತು ಕಾಯಿ ಕೊರಕದ ನಿರ್ವಹಣೆ | 10 | 10 | 5 |
| 41. | ಹೀರೆ ಕಾಯಿ | ಹೀರೆಕಾಯಿಯಲ್ಲಿ ಹಣ್ಣು ನೊಣದ ನಿರ್ವಹಣೆ | 5 | 5 | 2.5 |

| | | | | | |
|---|---|---|---|---|---|
| 42. | ಮೀನು | ಕೊಳಗಳಲ್ಲಿ ತಿಂಡಿ ಮಿಶ್ರಣಗಳ ಆಧಾರದ ಮೇಲೆ ಗೆಂಡೆ ಮೀನುಗಳ ಸಾಕಾಣೆ | 6 | 6 | 1.5 |
| 43. | | ಗೆಂಡೆ ಮೀನು ಸಾಕಾಣೆ ಕೊಳಗಳಲ್ಲಿ ನೀರಿನ ಗುಣಮಟ್ಟದ ನಿರ್ವಹಣೆ | 6 | 6 | 3.5 |
| 44. | | ಮೀನು ಮರಿ ಉತ್ಪಾದನಾ ಕೊಳಗಳಲ್ಲಿ ಜಲಚರ ಕೀಟಗಳ ನಿರ್ವಹಣೆ ಮತ್ತು ಸಮತೋಲನ ಆಹಾರ ಪ್ರಾತ್ಯಕ್ಷಿಕೆ | 5 | 5 | 6.25 |
| 45. | ಉದ್ದು | ಭತ್ತದ ಗದ್ದೆಯ ಉಳಿಕೆ ತೇವಾಂಶದಲ್ಲಿ ಉದ್ದು ತಳಿ – ಎಲ್.ಬಿ.ಜಿ-791 ಮುಂಚೂಣಿ ಪ್ರಾತ್ಯಕ್ಷಿಕೆ | 13 | 13 | 10 |
| 46. | | ಯು.ಎ.ಹೆಚ್.ಎಸ್. ವಿನ್ಯಾಸಿತ ಪವರ ಟಿಲ್ಲರ್ ಚಾಲಿತ ಉದ್ದು ಬಿತ್ತುವ ಕೂರಿಗೆ ಪ್ರಾತ್ಯಕ್ಷಿಕೆ. | 25 | 25 | 25 |
| 47. | ಶೇಂಗಾ | ಶೇಂಗಾ ಬೆಳೆಯ ಸಮಗ್ರ ಬೆಳೆ ನಿರ್ವಹಣೆ | 10 | 10 | 4 |
| 48. | ರಾಗಿ | ಅಧಿಕ ಇಳುವರಿಗಾಗಿ ಎಂ.ಆರ್.-365 ರಾಗಿ ತಳಿಗಳ ಪ್ರಾತ್ಯಕ್ಷಿಕೆ | 10 | 10 | 4 |
| 49. | ಹೆಸರು | ಹೆಸರು ಬೆಳೆಯ ಸಮಗ್ರ ಬೆಳೆ ನಿರ್ವಹಣೆ | 5 | 5 | 2 |
| 50. | ಈರುಳ್ಳಿ | ಈರುಳ್ಳಿ ಬೀಮಾ ಸೂಪರ್ ತಳಿಯ ಪ್ರಾತ್ಯಕ್ಷಿಕೆ | 5 | 5 | 2 |
| 51. | ಈರುಳ್ಳಿ | ಹಿಂಗಾರು ಹಂಗಾಮಿನಲ್ಲಿ ಅಧಿಕ ಇಳುವರಿಗಾಗಿ ಈರುಳ್ಳಿ ಬೀಮಾ ಶಕ್ತಿ ತಳಿಯ ಪ್ರಾತ್ಯಕ್ಷಿಕೆ | 5 | 5 | 2 |
| 52. | ಮಾವು | ಮಾವಿನ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣಾ ಕ್ರಮಗಳು | 12 | 12 | 5 |
| 53. | ತೊಗರಿ | ತೊಗರಿ ಬೆಳೆಯಲ್ಲಿ ಸಮಗ್ರ ಕಾಯಿ ಕೊರಕ ಮತ್ತು ಬಂಜೆ ರೋಗ ನಿರ್ವಹಣಾ ಕ್ರಮಗಳು | 10 | 10 | 4 |
| 54. | ಕಡಲೆ | ಹಿಂಗಾರು ಕಡಲೆ ಬೆಳೆಯ ಸಮಗ್ರ ಕಾಯಿ ಕೊರಕ ಮತ್ತು ಸೊರಗು ರೋಗ ನಿರ್ವಹಣಾ ಕ್ರಮಗಳು | 10 | 10 | 4 |
| 55. | ಅಡಿಕೆ | ಅಡಿಕೆ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | 10 | 10 | 4 |
| 56. | ಬಾಳೆ | ಅಧಿಕ ಇಳುವರಿಗಾಗಿ ಬಾಳೆ ಸ್ಪೆಷಲ್ ಬಳಕೆ ತಾಂತ್ರಿಕತೆ ಪ್ರಾತ್ಯಕ್ಷಿಕೆ | 10 | 10 | 4 |
| 57. | ಮೆಕ್ಕೆಜೋಳ | ಮೆಕ್ಕೆಜೋಳದಲ್ಲಿ ಸೈನಿಕ ಹುಳುವಿನ ಸಮಗ್ರ ಹತೋಟಿ ಕ್ರಮಗಳು | 10 | 10 | 4 |
| 58. | ರೇಷ್ಮೇ | ರೇಷ್ಮೇ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 10 | 10 | 4 |

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

## ಜಿಲ್ಲಾವಾರು ಕೃಷಿ ವಿಸ್ತರಣಾ ಚಟುವಟಿಕೆಗಳ ವಿವರ

| ವಿಸ್ತರಣಾ ಚಟುವಟಿಕೆಗಳು | ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ವಿಜಯ ನಗರ |
|---|---|---|---|---|---|---|---|
| | ಕಾರ್ಯಕ್ರಮ | ಕಾರ್ಯಕ್ರಮ | ಕಾರ್ಯಕ್ರಮ | ಕಾರ್ಯಕ್ರಮ | ಕಾರ್ಯಕ್ರಮ | ಕಾರ್ಯಕ್ರಮ | ಕಾರ್ಯಕ್ರಮ |
| ಕ್ಷೇತ್ರೋತ್ಸವ | 12 | 31 | 8 | 15 | 18 | 09 | 6 |
| ಕಿಸಾನ್ ಮೇಳ | 01 | 03 | 01 | 04 | 03 | 05 | 02 |
| ವಸ್ತು ಪ್ರದರ್ಶನ | 02 | 04 | 02 | 05 | 06 | 04 | 01 |
| ಚಲನಚಿತ್ರ ಪ್ರದರ್ಶನ | 14 | 10 | 3 | 26 | 6 | 4 | 01 |
| ಪದ್ಧತಿ ಪ್ರಾತ್ಯಕ್ಷಿಕೆ | 21 | 52 | 18 | 05 | 43 | 24 | 17 |
| ಗುಂಪು ಸಭೆ | 11 | 26 | 09 | 25 | 36 | 19 | 08 |
| ಉಪನ್ಯಾಸಗಳು | 23 | 61 | 22 | 15 | 47 | 22 | 19 |
| ಬಾನುಲಿ ಕಾರ್ಯಕ್ರಮ | 19 | 51 | 13 | 25 | 18 | 11 | 05 |
| ದೂರದರ್ಶನ ಕಾರ್ಯಕ್ರಮ | 09 | 22 | 05 | 34 | 06 | – | – |
| ವಿಜ್ಞಾನಿಗಳ ಕ್ಷೇತ್ರ ಭೇಟಿ | 79 | 95 | 35 | 31 | 65 | 55 | 23 |
| ಸಮಸ್ಯಾತ್ಮಕ ಕ್ಷೇತ್ರ ಭೇಟಿ | 23 | 60 | 25 | 31 | 43 | 68 | 18 |
| ಎಕ್ಸ್‌ಪೋಜರ್ ಭೇಟಿ | 08 | 13 | 08 | 02 | 09 | – | 05 |
| ಪಶು ಚಿಕಿತ್ಸಾ ಶಿಬಿರ | 04 | 12 | 07 | 15 | 08 | – | 04 |
| ಪ್ರಮುಖ ದಿನಗಳ ಆಚರಣೆ | 05 | 06 | 03 | 06 | 05 | – | 03 |
| ಕಾರ್ಯಾಗಾರ /ವಿಚಾರ ಸಂಕಿರಣಗಳು | 31 | 42 | 22 | 38 | 27 | 26 | 16 |
| ಮಣ್ಣು ಪರೀಕ್ಷೆ | 265 | 296 | – | 210 | 633 | 18 | – |
| ನೀರು ಪರೀಕ್ಷೆ | 250 | 66 | – | 215 | 518 | 27 | – |

## ಜಿಲ್ಲಾವಾರು ಕೃಷಿ ವಿಸ್ತರಿಸಬಹುದಾದ ಪ್ರದೇಶಗಳ ಸಮೀಕ್ಷೆ / ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮಗಳ ವಿವರ

| ಕೃಷಿ ವಿಸ್ತರಿಸಬಹುದಾದ ಪ್ರದೇಶಗಳ ಸಮೀಕ್ಷೆ | | ಆಯಾ ವ್ಯಾಪ್ತಿಯಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಏನು ಕ್ರಮ ವಹಿಸಿದೆ |
|---|---|---|
| ಜಿಲ್ಲೆ | ತಾಲೂಕುಗಳು | |
| ಬೀದರ | 08 | • ವಿವಿಧ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪರಿಶೀಲನೆಗಳು ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. |
| ಬಳ್ಳಾರಿ | 05 | • ಮಳೆ ನೀರು ಕೊಯ್ಲು, ತೇವಾಂಶ ಸಂರಕ್ಷಣಾ ಪದ್ಧತಿಗಳ ಅಳವಡಿಕೆ, ಹವಾಮಾನ ಆಧಾರಿತ ಕೃಷಿ ಮತ್ತು ಬರನಿರೋಧಕ ಬೆಳೆಗಳಿಗೆ ಆದ್ಯತೆ, ಪರ್ಯಾಯ ಬೆಳೆ ಯೋಜನೆ.<br>• ಬಹು ಬೆಳೆ / ಅಂತರ ಬೆಳೆ / ಕೃಷಿ ಪದ್ಧತಿಯ ಅಳವಡಿಕೆಗೆ ಆದ್ಯತೆ, ಸಮಗ್ರ ನೀರಿನ/ಪೋಷಕಾಂಶಗಳ ನಿರ್ವಹಣೆ, ಸವಳು ಮತ್ತು ಜವಳು ಮಣ್ಣಿನ ಸುಧಾರಣೆ.<br>• ಸಮಗ್ರ ಸಸ್ಯ ಸಂರಕ್ಷಣಾ ಮತ್ತು ಪೋಷಕಾಂಶಗಳ ಕ್ರಮಗಳ ಅಳವಡಿಕೆ.<br>• ಮಾರುಕಟ್ಟೆಯ ಬಗ್ಗೆ ಸಮಯೋಚಿತ ಮಾಹಿತಿ ಒದಗಿಸುವುದು, ಮೌಲ್ಯವರ್ಧನೆಗೆ ಒತ್ತು.<br>• ಅಧಿಕ ಇಳುವರಿ ಕೊಡುವ, ಕಡಿಮೆ ಅವಧಿಯ, ಬರ, ಕೀಟ ಮತ್ತು ರೋಗ ನಿರೋಧಕ ತಳಿಗಳ ಪರಿಚಯ, ಸಮಗ್ರ ಬೆಳೆ ಪದ್ಧತಿ ಅಳವಡಿಕೆ.<br>• ಸಮಗ್ರ ಬೆಳೆ ಪದ್ಧತಿ ಅಳವಡಿಕೆಗೆ ತಾಂತ್ರಿಕತೆ<br>• ಸಮಗ್ರ ಕಳೆ ಮತ್ತು ಕೀಟ ನಿರ್ವಹಣೆ<br>• ಸುರಕ್ಷಿತಾ ಧಾನ್ಯ ಶೇಖರಣಾ ಪದ್ಧತಿ ಅಳವಡಿಕೆಗೆ ಆದ್ಯತೆ.<br>• ಪೋಷಕಾಂಶಯುಕ್ತ ಉತ್ತಮ ಮೇವಿನ ಬೆಳೆಗಳ ಪರಿಚಯ<br>• ಬೈಪಾಸ್ ಫ್ಯಾಟ್, ಬೈಪಾಸ್ ಪ್ರೋಟೀನ್, ಚಿಲೇಟೆಡ್ ಖನಿಜ ಮಿಶ್ರಣಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ಪರಿಚಯ.<br>• ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಸಾವಯವ ಮತ್ತು ಹಸಿರು ಗೊಬ್ಬರದ ಬಳಕೆ, ಬೆಳೆ ಪರಿವರ್ತನೆ ಇತ್ಯಾದಿ. |
| ಕಲಬುರಗಿ | 07 | • ವಿವಿಧ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಮತ್ತು ಕೃಷಿ ಪರಿಕರಗಳ ವಿತರಕರಿಗೆ ಆಧುನಿಕ ಕೃಷಿ ತಾಂತ್ರಿಕತೆಗಳ ಕುಶಲತೆಯನ್ನು ಹೆಚ್ಚಿಸುವುದು ಹಾಗೂ ಅಭಿವೃದ್ಧಿಪಡಿಸಿದ ತಾಂತ್ರಿಕತೆಗಳನ್ನು ಪರಿಚಯಿಸುವುದು<br>• ಮಣ್ಣಿನ ಸಂರಕ್ಷಣೆ ಕುರಿತು ಮಾಹಿತಿ ನೀಡುವುದು<br>• ರೈತ ಉತ್ಪಾದಕ ಸಂಘಗಳ ಮೂಲಕ ಉದ್ಯಮಶೀಲತೆಯನ್ನು ಹೆಚ್ಚಿಸುವುದು<br>• ವಿವಿಧ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪರಿಶೀಲನೆಗಳು ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. |
| ಯಾದಗಿರಿ | 05 | • ಒಂದು ಜಿಲ್ಲೆ ಒಂದು ಉತ್ಪನ್ನ ಕಾರ್ಯಕ್ರಮಗಳು<br>• ರೈತ ಉತ್ಪಾದಕರ ಕಂಪನಿ ಸ್ಥಾಪನೆ |

| | | |
|---|---|---|
| | | • ಉತ್ತಮ ತಳಿಗಳ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳು |
| ರಾಯಚೂರು | 07 | • ಹೊಸ ತಳಿಯ ಬೀಜಗಳನ್ನು ಅಳವಡಿಸಿಕೊಳ್ಳುವುದು<br>• ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣೆ<br>• ಮಣ್ಣಿನ ಸಂರಕ್ಷಣೆ ಕುರಿತು ಮಾಹಿತಿ ನೀಡುವುದು<br>• ಶ್ರೇಣೀಕರಣ, ಪ್ಯಾಕೇಜಿಂಗ್, ಬ್ರಾಂಡಿಂಗ್, ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ<br>• ವಿವಿಧ ಯೋಜನೆಯಡಿಯಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಯೋಜನೆ<br>• ರೈತ ಉತ್ಪಾದಕ ಸಂಘಗಳ ಮೂಲಕ ಉದ್ಯಮಶೀಲತೆಯನ್ನು ಹೆಚ್ಚಿಸುವುದು<br>• ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಕಡಲೆ ಮತ್ತು ತೊಗರಿ ಬೆಳೆಯ ಲಘು ಪೋಷಕಾಂಶದ ಬಳಕೆ |
| ಕೊಪ್ಪಳ | 06 | • ಬೇಸಾಯ ಕ್ರಮಗಳು<br>• ಬೆಳೆಗಳ ಸಮಗ್ರ ನಿರ್ವಹಣೆ<br>• ಸಸ್ಯ ಸಂರಕ್ಷಣೆ<br>• ಅಣಬೆ ಕೃಷಿ,ಜೇನು ಕೃಷಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಂದ ಬಿಡುಗಡೆಯಾಗಿರುವ ಅಧಿಕ ಇಳುವರಿ ನೀಡುವ ತಳಿಗಳ ಹಾಗೂ ತಾಂತ್ರಿಕತೆಗಳ ಕುರಿತು ಮಾಹಿತಿ ಹಾಗೂ ಪ್ರಾತ್ಯಕ್ಷತೆ ಕೈಗೊಳ್ಳಲಾಗುತ್ತಿದೆ |
| ವಿಜಯನಗರ | 05 | • ಸಮಗ್ರ ಸಸ್ಯ ಸಂರಕ್ಷಣಾ ಮತ್ತು ಪೋಷಕಾಂಶಗಳ ಕ್ರಮಗಳ ಅಳವಡಿಕೆ.<br>• ಸಮಗ್ರ ಬೆಳೆ ಪದ್ಧತಿ ಅಳವಡಿಕೆಗೆ ತಾಂತ್ರಿಕತೆ<br>• ವಿವಿಧ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪರಿಶೀಲನೆಗಳು ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. |

# ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನದಲ್ಲಿನ ವಿವಿಧ ಕೇಂದ್ರಗಳ ಕೃಷಿ ವಿಸ್ತರಣಾ ಕಾರ್ಯಕ್ರಮಗಳು :

1. ಕೃಷಿ ಮೇಳಗಳು ಮತ್ತು ವಸ್ತು ಪ್ರದರ್ಶನ
2. ಭೂಚೇತನ (ಸಮಗ್ರ ಕೃಷಿ ವಿಸ್ತರಣಾ ಪದ್ಧತಿ ಯೋಜನೆ)
3. ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ
4. ಪೌಷ್ಟಿಕ ತೃಣಧಾನ್ಯಗಳ ಉತ್ಪಾದನೆ ಉತ್ತೇಜಿಸುವ ಕಾರ್ಯಕ್ರಮ
5. ಕಾಲು ಬಾಯಿ ರೋಗ ನಿಯಂತ್ರಣ ಕಾರ್ಯಕ್ರಮ
6. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ
7. ವಿವಿಧ ಬೆಳೆ ಮತ್ತು ಕೃಷಿ ಪದ್ಧತಿಗಳಲ್ಲಿ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಕೃಷಿ ತಾಂತ್ರಿಕತೆಗಳನ್ನು ಗುರುತಿಸುವುದು ಹಾಗೂ ಪರಿಶೀಲಿಸುವುದು
8. ರೈತ ಹಾಗೂ ರೈತಮಹಿಳೆಯರ ಕೃಷಿ ಜ್ಞಾನವನ್ನು ನವೀಕರಿಸಲು, ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ಆಧುನಿಕ ಕೃಷಿ ತಾಂತ್ರಿಕತೆಗಳ ಕುಶಲತೆಯನ್ನು ಹೆಚ್ಚಿಸಲು ತರಬೇತಿ, ಕ್ಷೇತ್ರಭೇಟಿ, ಕೃಷಿ ಅಧ್ಯಯನ ಪ್ರವಾಸ, ಕ್ಷೇತ್ರೋತ್ಸವ ಹಾಗೂ ಕ್ಷೇತ್ರ ಪ್ರಯೋಗಗಳನ್ನು ಹಮ್ಮಿಕೊಳ್ಳುವುದು.
9. ವಿವಿಧ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಮತ್ತು ಕೃಷಿ ಪರಿಕರಗಳ ವಿತರಕರಿಗೆ ಆಧುನಿಕ ಕೃಷಿ ತಾಂತ್ರಿಕತೆಗಳ ಕುಶಲತೆಯನ್ನು ಹೆಚ್ಚಿಸುವುದು ಹಾಗೂ ಅಭಿವೃದ್ಧಿಪಡಿಸಿದ ತಾಂತ್ರಿಕತೆಗಳನ್ನು ಪರಿಚಯಿಸುವುದು.
10. ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು ಸರ್ಕಾರಿ, ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರದಂತೆ ಕಾರ್ಯನಿರ್ವಹಿಸುವುದು.
11. ಅವಶ್ಯಕತೆಗಳಿಗನುಗುಣವಾಗಿ ಗುಣಮಟ್ಟದ ಬೀಜ, ಸಸಿ, ಜಾನುವಾರು ತಳಿಗಳು, ಪಶು ಉತ್ಪನ್ನಗಳು, ಜೈವಿಕ ಉತ್ಪನ್ನಗಳು ಹಾಗೂ ಪೌಷ್ಟಿಕ ಭರಿತ ಉತ್ಪನ್ನಗಳ ಬಗ್ಗೆ ಸಕಾಲಕ್ಕೆ ಮಾಹಿತಿ ನೀಡುವುದು.
12. ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿ)
13. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಕಲ್ಯಾಣ ಕರ್ನಾಟಕ ರೈತರ ಆರ್ಥಿಕ ಸಬಲೀಕರಣ.
14. ಎನ್.ಎಫ್.ಎಸ್.ಎಮ್. ಅಡಿಯಲ್ಲಿ ದ್ವಿದಳ ಧಾನ್ಯಗಳ ಮುಂಚೂಣಿ ಪ್ರಾತ್ಯಕ್ಷಿಕೆ
15. ಎನ್.ಎಮ್.ಓ.ಓ.ಪಿ ಅಡಿಯಲ್ಲಿ ಎಣ್ಣೆಕಾಳು ಬೆಳೆಗಳ ಗುಚ್ಛ ಪ್ರಾತ್ಯಕ್ಷತೆ.

## ಅನುಬಂಧ-2

### ರಾಜ್ಯದಲ್ಲಿ ಕೃಷಿ ಇಲಾಖೆ ವತಿಯಿಂದ ಕೈಗೊಳ್ಳುವ ಕೃಷಿ ವಿಸ್ತರಣಾ ಚಟುವಟಿಕೆಗಳ ವಿವರಗಳು

### ಕೃಷಿ ವಿಸ್ತರಣಾ ಚಟುವಟಿಕೆ

- ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕಾರ್ಯಕ್ರಮಗಳು ಮಾರುಕಟ್ಟೆ ಮಾಹಿತಿ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಆಧುನಿಕ ಕೃಷಿ ಕುರಿತು ಮಾಹಿತಿ ನೀಡಲಾಗುತ್ತಿದೆ.
- ಕೃಷಿ ಪರಿಕರಗಳಾದ ಬೀಜ ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ, ಕೃಷಿ ಯಂತ್ರೋಪಕರಣ, ಸೂಕ್ಷ್ಮ ನೀರಾವರಿ ಘಟಕಗಳು ಮುಂತಾವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು.
- ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸುವುದು.
- ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಮತ್ತು ಇತರೆ ಪರಿಕರಗಳ (ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆಗಾಗಿ ಸೌಲಭ್ಯ ಒದಗಿಸುವುದು.
- ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ/ಪರಿಶೀಲನೆಗೆ ಅವಕಾಶ ಒದಗಿಸುವುದು.
- ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡುವುದು.
- ನಿಯತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದ ಅನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ ಇಲಾಖೆಯ ವಿವಿಧ ಯೋಜನೆಗಳನ್ನು /ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ಪೋಸ್ಟರ್, ಕರಪತ್ರಗಳ ಮುಖಾಂತರ, ಗ್ರಾಮಸಭೆಗಳು ಮತ್ತು ತರಬೇತಿಗಳಲ್ಲಿ ಜನಪ್ರತಿನಿಧಿಗಳಿಗೆ ಹಾಗೂ ರೈತರಿಗೆ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು.
- ರೈತ ಸಂಪರ್ಕ ಕೇಂದ್ರಗಳನ್ನು ರೈತರಿಗೆ ಮಾಹಿತಿ ತಂತ್ರಜ್ಞಾನ ವಿನಿಮಯಕ್ಕೆ ಹೆಚ್ಚಿನ ಒತ್ತು ನೀಡುವುದರ ಮೂಲಕ ನೋಡಲ್ ಕ್ರಿಯಾಶೀಲ ಕೇಂದ್ರಗಳಾಗಿ ಬಲಪಡಿಸಲು ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕ್ಷೇತ್ರಮಟ್ಟದಲ್ಲಿ ಕ್ರಮವಹಿಸಲು ಆಯಾ ಹೋಬಳಿಯ ರೈತರಿಗೆ ಅನುಕೂಲವಾಗುವಂತೆ ರೈತ ಸಂಪರ್ಕ ಕೇಂದ್ರಗಳಲ್ಲಿಯೇ ಸಭೆಗಳನ್ನು ಏರ್ಪಡಿಸಿ ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಅರಣ್ಯ, ಮೀನುಗಾರಿಕೆ, ಸಹಕಾರ ಇಲಾಖೆಗಳ ಅಧಿಕಾರಿಗಳ ಉಪಸ್ಥಿತಿಯಲ್ಲಿ ರೈತರಿಗೆ ಈ ಕೆಳಗಿನಂತೆ ಮಾಹಿತಿ ನೀಡಲಾಗುತ್ತಿದೆ.
- ಇಲಾಖೆಗಳ ವಿವಿಧ ಯೋಜನೆಗಳು, ಯೋಜನೆಯ ಸೌಲಭ್ಯ ಪಡೆಯಲು ಬೇಕಾಗುವ ರೈತರ ದಾಖಲಾತಿಗಳ ಬಗ್ಗೆ ಮಾಹಿತಿ ನೀಡುವುದು.
- ನೂತನ ತಾಂತ್ರಿಕತೆಗಳ ಬಗ್ಗೆ,
- ಮಾರುಕಟ್ಟೆ ಸೌಲಭ್ಯ, ಪ್ರಸ್ತುತ ಕೃಷಿ /ತೋಟಗಾರಿಕೆ/ರೇಷ್ಮೆ ಉತ್ಪನ್ನಗಳ ಮಾರಾಟ ದರ ಕುರಿತು
- ಮುಂದಿನ 15 ದಿನಗಳವರೆಗಿನ ಹವಾಮಾನ ಮುನ್ಸೂಚನೆ ಹಾಗೂ ಹವಾಮಾನ ವಿಕೋಪಗಳನ್ನು ಎದುರಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ.
- * ಕೀಟ, ರೋಗ ಬರುವ ಸಾಧ್ಯತೆ ಮತ್ತು ನಿರ್ವಹಣೆ, ಬೆಳೆ ವಿಮೆ ನೋಂದಣಿ ಬಗ್ಗೆ ಸೂಕ್ತ ಮಾಹಿತಿಯನ್ನು ಮತ್ತು ರೈತರ

ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುತ್ತಿದೆ.

- *ಸದರಿ ಸಭೆಗಳಲ್ಲಿ ಸಂಬಂಧಿತ ಕೃಷಿ ಹ್ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳ ಒಬ್ಬ ವಿಜ್ಞಾನಿ/ ಸಿಬ್ಬಂದಿಯು ಪಾಲ್ಗೊಂಡು ರೈತರ ಸಾಗುವಳಿ ವೆಚ್ಚವನ್ನು ಕಡಿಮೆ ಮಾಡಿ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳು ಹಾಗೂ ರಸಗೊಬ್ಬರಗಳ ಪೂರೈಕೆ, ನೀರಾವರಿ ಹಾಗೂ ಕೃಷಿ ಯಾಂತ್ರೀಕರಣದ ಮೂಲಕ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಿ ಕೊಯ್ಲೋತ್ತರ ನಿರ್ವಹಣೆ, ಮೌಲ್ಯವರ್ಧನೆ ಹಾಗೂ ಉತ್ತಮ ಮಾರಾಟ ಪದ್ಧತಿಗಳ ಮೂಲಕ ರೈತರಿಗೆ ಹೆಚ್ಚಿನ ಲಾಭ ಬರುವ ನಿಟ್ಟಿನಲ್ಲಿ ಮಾಹಿತಿ ನೀಡಲು ಕ್ರಮ ವಹಿಸಿದೆ.
- ಕೃಷಿ ಅಭಿಯಾನ: ಹೋಬಳಿವಾರು ಇಲಾಖಾ ಕಾರ್ಯ ಕ್ರಮಗಳ ಬಗ್ಗೆ ಹಾಗೂ ಇತರೆ ಸಂಬಂಧಿತ ಇಲಾಖೆಗಳ ಮಾಹಿತಿಯನ್ನು ರೈತರಿಗೆ ಪ್ರಚುರ ಪಡಿಸಲು ದಿನದ ಕಾರ್ಯಕ್ರಮ ಜಾರಿಯಲ್ಲಿದೆ.
- ಸಿರಿಧಾನ್ಯ ಹಬ್ಬ, ರೋಡ್ ಶೋ, ಪ್ರಚಾರ ಇತ್ಯಾದಿಗಳನ್ನು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗುತ್ತದೆ.
- ಜಿಲ್ಲೆಯ ಪ್ರಗತಿಪರ ರೈತರು, ಚುನಾಯಿತ ಪ್ರತಿನಿಧಿಗಳು ಹಾಗೂ ಇಲಾಖಾ ಅಧಿಕಾರಿಗಳ ವಾಟ್ಸ್ ಆಪ್ ಗ್ರೂಪ್ ಮುಖಾಂತರ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿಗಳನ್ನು ನೀಡಲಾಗುತ್ತದೆ.
- ಇಲಾಖೆಯ ವಿವಿಧ ಕಾರ್ಯಕ್ರಮಗಳು ಪ್ರಮುಖವಾಗಿ ಬೆಳೆ ಸಮೀಕ್ಷೆ ಬಗ್ಗೆ ರೇಡಿಯೋ ಜಿಂಗಲ್ಸ್ ಮೂಲಕ ಬಸ್ ನಿಲ್ದಾಣಗಳಲ್ಲಿ ಮಾಹಿತಿ ಭಿತ್ತರಿಸಲಾಗುತ್ತದೆ.
- ಗ್ರಾಮಮಟ್ಟದಲ್ಲಿ ರೈತರಿಗೆ ಗೂಗಲ್ ಮೀಟ್ ಮೂಲಕ ಸಭೆಗಳನ್ನು ಆಯೋಜಿಸಲಾಗಿದೆ.
- ವಿವಿಧ ಯೋಜನೆಗಳಡಿಯಲ್ಲಿ ಆಧುನಿಕ ಕೃಷಿಗೆ ಸಂಬಂದಿಸಿದಂತೆ ಕರಪತ್ರ, ಭಿತ್ತಿ ಚಿತ್ರ, ಇಲಾಖೆ ಕೈಪಿಡಿ ಮತ್ತು ಆಟೋ ಪ್ರಚಾರ ಮೂಲಕ ರೈತರಿಗೆ ಇಲಾಖಾ ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸುವ ಜೊತೆಗೆ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ರೈತರಿಗೆ ತರಬೇತಿಗಳನ್ನು ಆಯೋಜಿಸುವ ಮೂಲಕ ಕೃಷಿ ವಿಸ್ತರಣೆಯನ್ನು ಕೈಗೊಳ್ಳಲಾಗುತ್ತದೆ.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜರುಗುವ ಗ್ರಾಮ ಸಭೆಗಳು, ಗ್ರಾಮ ವಾಸ್ತವ್ಯ ಮತ್ತು ಜನಸ್ಪಂಧನ ಕಾರ್ಯಕ್ರಮಗಳಲ್ಲಿ ಇಲಾಖಾ ಅಧಿಕಾರಿಗಳು ಕೃಷಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಾರೆ.

# ಅನುಬಂಧ-3
## ರಾಜ್ಯದಲ್ಲಿ ಕೃಷಿ ಇಲಾಖಾ ವತಿಯಿಂದ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಲು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು

| ಕ್ರ.ಸಂ | ಯೋಜನೆ/ ಕಾರ್ಯಕ್ರಮ | ವಿವರ |
|---|---|---|
| 1. | ಬಿತ್ತನೆ ಬೀಜಗಳ ಪೂರೈಕೆ | ಈ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿವಿಧ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಒಟ್ಟಾರೆ ಗರಿಷ್ಠ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ವಿತರಣೆ ಮಾಡಲಾಗುತ್ತದೆ. |
| 2. | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN) | ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುತ್ತದೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ರೂ.4000/-ಗಳನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ. |
| 3. | ಸಾವಯವ ಕೃಷಿ . | ಸಾವಯವ ಕೃಷಿ ಅಳವಡಿಕೆ ಮತ್ತು ದೃಡೀಕರಣ ಕಾರ್ಯಕ್ರಮದಡಿ ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು ವಿಸ್ತರಿಸುವ ನಿಟ್ಟಿನಲ್ಲಿ ಆಸಕ್ತ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳ ಪ್ರಮಾಣೀಕರಣಕ್ಕಾಗಿ ಅನುದಾನ ಬಳಕೆ ಮಾಡಲಾಗುತ್ತದೆ. |
| 4. | ರೈತ ಸಿರಿ | ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10,000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು. ಸಿರಿಧಾನ್ಯಗಳನ್ನು ಬೆಳೆದ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ವಿತರಿಸಲಾಗುತ್ತದೆ.. |
| 5. | ಸೂಕ್ಷ್ಮ ನೀರಾವರಿ | ಹನಿ / ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ (2.00 ಹೆಕ್ಟೇರ್ ವರೆಗೆ) ಒದಗಿಸಲಾಗುತ್ತದೆ. |

| | | |
|---|---|---|
| 6. | ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ | ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ದತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್ / ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ |

| **ಕ್ರ.ಸಂ** | **ಯೋಜನೆ/ ಕಾರ್ಯಕ್ರಮ** | **ವಿವರ** |
|---|---|---|
| | | ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷ ಹಾಗು ಸಾಮಾನ್ಯ ರೈತರಿಗೆ ರೂ.0.75ಲಕ್ಷಗಳಂತೆ ಗರಿಷ್ಠ ಸಹಾಯಧನವನ್ನು ನೀಡಲಾಗುತ್ತದೆ. |
| 7. | ಕೃಷಿ ಯಂತ್ರಧಾರೆ | ರಾಜ್ಯದಲ್ಲಿಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ.ಯಂತ್ರಧಾರೆ (ಕೃಷಿ ಯಮತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ )ಕೇಂದ್ರಗಳನ್ನು ತೆರೆಯಲಾಗಿರುತ್ತದೆ. |
| 8. | ತರಬೇತಿ ಕಾರ್ಯಕ್ರಮಗಳು | ಈ ಯೋಜನೆಯಡಿ ಕೃಷಿ ವಿಸ್ತರಣಾ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ವಿಶೇಷ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗುತ್ತದೆ. |

| | | |
|---|---|---|
| 9. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ | ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು, ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. |
| 10. | ಸಸ್ಯ ಸಂರಕ್ಷಣೆ | ಶೇ.50ರ ರಿಯಾಯಿತಿಯಲ್ಲಿ ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು ವಿತರಣೆ ಮಾಡಲಾಗುತ್ತದೆ. |
| 11. | ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ | ಎರೆಹುಳು - ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್ ರಿಯಾಯತಿ ದರದಲ್ಲಿ ವಿತರಣೆ ಮಾಡುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತದೆ. |
| 12. | ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ | ವಿವಿಧ ದ್ವಿದಳ ಧಾನ್ಯ ಬೀಜಗಳು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತದೆ. |
| 13. | ಕೃಷಿ ವಿಸ್ತರಣಾ ಉಪ ಅಭಿಯಾನ (SAME-ATMA) | ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಗಿದೆ. |
| **ಕ್ರ.ಸಂ** | **ಯೋಜನೆ/ ಕಾರ್ಯಕ್ರಮ** | **ವಿವರ** |
| 14. | ಮಣ್ಣಿನ ಫಲವತ್ತತೆ ಯೋಜನೆ | ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಪ್ರತಿ ಹೆಕ್ಟೇರಿಗೆ ಗರಿಷ್ಟ ರೂ.2500/- ಸಹಾಯಧನ ನೀಡಲಾಗುತ್ತದೆ. |

| | | |
|---|---|---|
| 15. | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮ | ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ "ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತ್ಯಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವ ಉದ್ದೇಶದಿಂದ ಸಮಗ್ರ ಕೃಷಿ ಪದ್ಧತಿ ಮಾದರಿಗಳ ಅನುಷ್ಠಾನಕ್ಕೆ ಸಹಾಯಧನ ನೀಡಲಾಗುತ್ತದೆ. |
| 16. | ರೈತ ಶಕ್ತಿ ಕಾರ್ಯಕ್ರಮ | ರೈತರಿಗೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ಪ್ರತಿ ಎಕರೆಗೆ 250/- ರೂ.ಗಳಂತೆ ಗರಿಷ್ಠ ಐದು ಎಕರೆಗೆ ಡಿ.ಬಿ.ಟಿ ಮೂಲಕ ಡೀಸಲ್‌ಗೆ ಸಹಾಯಧನವನ್ನು ನೀಡಲಾಗುತ್ತದೆ. |